Regd No B ಬ 155 27-1-1970

SATYAVADI Daily, MYSORE 4 ‡ 53 rd Year of Publication

Golden Jubilee Celebrated Paper

ಸತ್ಯವಾದಿ

ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಪ್ರಕಟವಾಗುತ್ತಿರುವ ಪತ್ರಿಕೆ

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಮೆಸೂರಿಗೆ ವಿಲೀನ ಆಗಲು ಧರ್ಮಪುರಿಯ ಅಪೇಕ್ಷೆ

ಲ

ಗಣರಾಜ್ಯೋತ್ಸವ

ನಿನ್ನೆ ದೇಶಾದ್ಯಂತ ಗಣರಾಜ್ಯೋತ್ಸವವು ನೆರೆವೇರಿಸಲಾಯಿತು.

○

ಪುರಸಭಾ ಆಶ್ರಯದಲ್ಲಿ ಗಣರಾಜ್ಯ ದಿನಾಚರಣೆ

ಮೈಸೂರು— ನಿನ್ನೆ ಬೆಳಿಗ್ಗೆ ಪುರಭವನದ ಆವರಣದಲ್ಲಿ ಗಣರಾಜ್ಯ ದಿನಾಚರಣೆಯು ವೈಭವವಾಗಿ ನೆರೆವೇರಿಸಲಾಯಿತು — ಸಂಜೆ ಟೌನ್‌ಹಾಲ್ ಒಳಗಡೆ ಸಾಂಸ್ಕೃತಿಕ ಕಾರ್ಯಗಳು ಏರ್ಪಾಡಿತ್ತು.

●

ಪಾನನಿಷೇಧ

ನವದೆಹಲಿ— ದೇಶದ ಅನೇಕ ರಾಜ್ಯಗಳಲ್ಲಿ ಪಾನನಿಷೇಧವು ರದ್ದು ಅಥವಾ ಸಡಲಿಸಿರುವ ಬಗ್ಗೆ ರಾಷ್ಟ್ರಾಧ್ಯಕ್ಷ ಶ್ರೀ ಗಿರಿಯವರು ವಿಷಾದ ವ್ಯಕ್ತಪಡಿಸಿದರು.

○

ನವ್‌ಜೋತಿ ಮಹೋತ್ಸವ

ಶ್ರೀಮತಿ ಮತ್ತು ಶ್ರೀ ಫರೂಕ್ ಕೆ ಇರಾನಿಯವರು ತಮ್ಮ ಕುಮಾರಿ ಶ್ರೀ ರಾಯ್‌ಯನ್‌ರವರ ನವ್‌ಜೋತಿ ಮಹೋತ್ಸವನ್ನು ನಿನ್ನೆ ಬೆಳಿಗ್ಗೆ ಮೈಸೂರು ನಜರ್ ಬಾದಿನಲ್ಲಿರುವ ತಮ್ಮ ನಿವಾಸ " ಕೃಪಾಲಯ " ದಲ್ಲಿ ನೆರೆವೇರಿಸಿದರು.

★

ಟಿಕೀಟಿಲ್ಲದ ಪ್ರಯಾಣಿಕರು

ಭಾರತ ರೈಲುಗಳು ದಿನ 60 ಲಕ್ಷ ಜನರನ್ನು ಕೊಂಡೊಯುತ್ತಿದೆ: ಟಿಕೀಟಿಲ್ಲದೆ ದಿನ 3 ಲಕ್ಷ ಜನ ಪ್ರಯಾಣ ಮಾಡುತ್ತಿರುವರು ; ಇದರಿಂದ ಸರಕಾರಕ್ಕೆ ವರ್ಷಕ್ಕೆ ರೂ 20 ರಿಂದ 25 ಕೋಟಿ ನಷ್ಟವಾಗುತ್ತಿದೆ, ಎಂದು ರೈಲ್ವೇ ಬೋಡು ಅಧ್ಯಕ್ಷರು ಹೇಳಿರುವರು

ಗಣರಾಜ್ಯೋತ್ಸವ ದಿನಾಚರಣೆ

ನಿನ್ನೆ ಬೆಳಿಗ್ಗೆ ಮೈಸೂರು ಸರಕಾರಿ ಭವನದ ಆವರಣದಲ್ಲಿರುವ ಪೋಲೀಸು ಪೆರೇಡು ಮೈದಾನದಲ್ಲಿ ಗಣರಾಜ್ಯೋತ್ಸವವು ಬಹು ವೈಭವಯುತವಾಗಿ ನಡೆಯಿತು. ರಾಜ್ಯದ ನ್ಯಾಯಾಂಗ ಹಾಗೂ ಕಾರ್ಮಿಕ ಸಚಿವರಾದ ಶ್ರೀ ಪುಟ್ಟಸ್ವಾಮಿಯವರು ಗಣರಾಜ್ಯೋತ್ಸವದ ಅಂಗವಾಗಿ ನಡೆದ ಪೋಲೀಸು ಪೆರೇಡನ್ನು ವೀಕ್ಷಿಸಿ ಮಾರ್ಚ್‌ಫಾಸ್ಟ್ ಪೆಲ್ಯೂಟು ಸ್ವೀಕರಿಸಿದರು. ಸಚಿವರು ಈ ಸಂದರ್ಭದಂದು ಭಾಷಣ ಮಾಡುತ್ತಾ " ನಾವು ಸಂಪಾದಿಸಿದ ರಾಜಕೀಯ ಸ್ವಾತಂತ್ರ್ಯವನ್ನು ಎಂದೆಂದಿಗೂ ಕಾಪಾಡಿಕೊಂಡು ಹೋಗಬೇಕಲ್ಲದೆ, ಪ್ರಜಾಪ್ರಭುತ್ವದ ಹಕ್ಕಿಗೆ ಯಾವ ರೀತಿಯೂ ಧಕ್ಕೆ ಬಾರದಂತೆ ವ್ಯವಹರಿಸಬೇಕೆಂದೂ, ನಮ್ಮ ದೇಶದ ಅಭಿವೃದ್ಧಿಯತ್ತ ನಾವೆಲ್ಲ ಶ್ರಮಿಸಬೇಕೆಂದೂ ಕರೆಯಿತ್ತರು.

○

ಸಾಕ್ಷ್ಯಚಿತ್ರ ಪ್ರದರ್ಶನ

ಮೈಸೂರು— ಮಹಾತ್ಮಾ ಗಾಂಧಿಯವರ ವಿವಿಧ ಭಾವಗಳಿಗೆ ಸಂಬಂಧಿಸಿದ ಸಾಕ್ಷ್ಯ ಚಿತ್ರಗಳ 7 ದಿನಗಳ ಪ್ರದರ್ಶನೋತ್ಸವನ್ನು ಶನಿವಾರ ಪೌರಸಭಾಧ್ಯಕ್ಷ ಶ್ರೀ ಪುಟ್ಟಯ್ಯನವರು ಉದ್ಘಾಟಿಸಿದರು.

★

ಅದ್ಭುತ ಚಿಕಿತ್ಸೆ

ಮಾಸ್ಕೋ— ಒಬ್ಬ ಮಹಿಳೆಯ ಶ್ವಾಸಕೋಶದಲ್ಲಿ 20 ವರ್ಷಗಳಿಂದಿದ್ದ ಧಾನ್ಯ ತೆನೆಯನ್ನು ರಷ್ಯಾ ಡಾಕ್ಟರುಗಳು ತೆಗೆದರೆಂದು ವರದಿಯಾಗಿದೆ.

★

ಲೆವಿ ಪದ್ಧತಿ

ಹೈದರಾಬಾದು— ರಾಜ್ಯಾದ್ಯಂತ ಬೆಳೆಯ ಮೇಲೆ ಲೆವಿ ಪಡೆಯುತ್ತಿದ್ದುದನ್ನು ರದ್ದುಪಡಿಸಲಾಗಿದೆ.

ರಷ್ಯಾದಲ್ಲಿ ಪಾನನಿರೋಧ !

ಮಾಸ್ಕೋ— ರಷ್ಯಾದಲ್ಲಿ ಪಾನನಿರೋಧವನ್ನು ತಂದು, ಪಲಹಾರಮಂದಿರ ಮತ್ತು ಅಂಗಡಿಗಳಲ್ಲಿ ತೀಷ್ಣವಾದ ಮದ್ಯದ ಮಾರಾಟದ ಮೇಲೆ ನಿರ್ಬಂಧಿಸಲಾಗುವುದೆಂದು ಹೇಳಲಾಗಿದೆ.

★

ಬಸ್ ಅನಾಹುತ

ಮಧುರೈ— ಕೊಡೈಕಣಾಲ್ ಬೆಟ್ಟಗಳಲ್ಲಿರುವ ಡಂಡಂಪೆರ್ಯಾನಲ್ಲಿ ಒಂದು ಬಸ್ ಅನಾಹುತದಲ್ಲಿ 5 ಮಂದಿ ಸತ್ತು 30 ಮಂದಿ ಗಾಯಗೊಂಡರು.

★

ಮುಖ್ಯಮಂತ್ರಿಗಳ ಸಂದೇಶ

ಬೆಂಗಳೂರು— ಪ್ರಜಾಪ್ರಭುತ್ವ ಸಮತಾವಾದದ ಭಾರಿ ಪ್ರಯೋಗ ಯಶಸ್ವಿಯಾಗಿ ನಡೆಯುತ್ತಿರುವಾಗ ದೇಶದಲ್ಲಿ ಜಗಳಗಳಿಗೆ ಪಕ್ಷಗಳಿಗೆ ಸ್ಥಾನವಿಲ್ಲವೆಂದು ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲ ಗಣರಾಜ್ಯ ಸಂದೇಶದಲ್ಲಿ ಹೇಳಿದರು ; ರಾಜ್ಯಾಂಗ ರಕ್ಷಣೆಯಲ್ಲಿ ದೇಶವು ಹೇಗೆ ಅಭಿವೃದ್ಧಿಗೊಳ್ಳುತ್ತಿರುವುದನ್ನು ನೆನಪಿಗೆ ತಂದುಕೊಂಡು ಸ್ಮತಿಯೊಬ್ಬರೂ ಭರವಸೆಯಿಂದ ನಿರ್ಧಾರದಿಂದ ಮುಂದಿನ ವಿಷಯವೋಚಿಸಬೇಕೆಂದರು.

●

ಖನೂಂ— ಡೆಕಾಯಿತಿ ಆಪಾದಕ್ಕಾಗಿ 6 ಮಂದಿ ನಕ್ಸಲೈಟರಿಗೆ ತಲಾ 5 ವರ್ಷ ಕಠಿಣ ಸಜೆ ವಿಧಿಸಲಾಯಿತು.

○

ಹೈದರಾಬಾದು— ತೆಲಂಗಾಣಾ ಜಿಲ್ಲೆಯ ಕಾಂಗ್ರೆಸ್ ಸಮಿತಿಯ ಕಾರ್ಯಕರ್ತರು ಫೆಬ್ರವರಿ 7 ರಂದು ಶಾಸನ ಸಭಾ ಚುನಾವಣೆ ಅಭ್ಯರ್ಥಿಗಳ ಆಯ್ಕೆಗಾಗಿ ಸಭೆ ಸೇರಲು ನಿರ್ಧರಿಸಿದ್ದಾರೆ.

ಚಂಡಿಘರ

ನವದೆಹಲಿ— ಚಂಡಿಘರವನ್ನು ಪಂಜಾಬಿಗೆ ಕೊಟ್ಟು, ಹರಿಯಾಣಾಕ್ಕೆ ಹೊಸ ರಾಜಧಾನಿ ಕಟ್ಟಿಕೊಳ್ಳಲು ಪರಿಹಾರ ನೀಡುವದೆಂಬುದನ್ನು ಸಾರ್ಲಿಮೆಂಟಿನ ವಿರೋಧ ವಕ್ತಾರರು ಹೆಚ್ಚು ಮಂದಿ ಪ್ರಧಾನಿಯವರಿಗೆ ತಿಳಿಸಿದರು.

○

ವಿಶ್ವ ಆಹಾರ ಕಾರ್ಯಕ್ರಮ

ವಿಶ್ವಸಂಸ್ಥೆ— ಭಾರತವೂ ಸೇರಿ 49 ರಾಷ್ಟ್ರಗಳು ಒಟ್ಟು ವಿಶ್ವ ಆಹಾರ ಕಾರ್ಯಕ್ರಮಕ್ಕೆ 2154235880 ಡಾಲರುಗಳನ್ನು ಹಾಕಲು ಗುಂಪುಕಟ್ಟಲಾಗಿದೆ — ಈ ಪೈಕಿ 14209488 ಡಾಲರುಗಳಷ್ಟು ಪದಾರ್ಥಗಳು, 37000000 ಡಾಲರಷ್ಟು ಸೇವೆ : 30214092 ಡಾಲರು ಹಣ — ಭಾರತವು 750000 ಡಾಲರು ಕೊಡಲೊಪ್ಪಿದೆ.

○

ಮೈಸೂರಿಗೆ ಸೇರುವ ಇಚ್ಛೆ

ಹೊಸೂರು— ಧರ್ಮಪುರಿ ಜಿಲ್ಲ ಹೊಸೂರನ್ನು ಮೈಸೂರು ಅಥವಾ ಆಂಧ್ರ ಪ್ರದೇಶಕ್ಕೆ ಸೇರ್ಪಡೆಗಾಗಿ, ಅಲ್ಲಿಯ ಬಹು ಸಂಖ್ಯಾತರಾಗಿರುವ ತೆಲುಗು ಮತ್ತು ಕನ್ನಡ ಮಾತನಾಡುವವರ ನಾಯಕರು ಕೈ ಹಾಕಿದಾರೆ.

○

ರಾಜಕೀಯ ಪರಿಷತ್ತು

ಬೆಳಗಾಂ ಜಿಲ್ಲಾ ಕಾಂಗ್ರೆಸ್ಸ್ ಸಮಿತಿಯಿಂದ ಫೆಬ್ರವರಿ ತಾ 13-14-15 ರಂದು ಮೈಸೂರು ರಾಜ್ಯದ ರಾಜಕೀಯ ಪರಿಷತ್ತನ್ನು ಬೆಳಗಾಂನಲ್ಲಿ ಕರೆಯಲಾಗಿದೆ — ಸದ್ಯದಲ್ಲಿನ ರಾಜಕೀಯ ಪರಿಸ್ಥಿತಿ ಮತ್ತಿತರ ಮಹತ್ವ ವಿಷಯಗಳನ್ನು ಪರಿಷತ್ತಿನಲ್ಲಿ ಚರ್ಚಿಸಲಾಗುವುದು.

ಫೆಡರಾಲ್ ರಿಪಬ್ಲಿಕ್ ಜರ್ಮನಿಯಲ್ಲಿ ಗಾಂಧೀಜೀ ಶತಾಬ್ದಿ ಉತ್ಸವ

ಇಲ್ಲಿನ ಶತಾಬ್ದಿಯ ಸಮಿತಿಯು ವಿವಿಧ ಕಾರ್ಯಕ್ರಮಗಳನ್ನು ಬಹಳ ಪ್ರಶಸ್ತವಾಗಿ ನಡೆಸಿತು. ಸಮಿತಿಯ ಅಧ್ಯಕ್ಷರಾದ ಮಿ || ಕೆಸಿಂಜರರಿಗೆ ಭಾರತದ ರಾಯಭಾರಿ ಶ್ರೀ ಕುಬ್‌ಚಿಂದ್‌ರವರು ಗಾಂಧೀಜೀ ನೆನಪಿನಲ್ಲಿ ಮುದ್ರಿಸಿದ ನಾಣ್ಯಗಳನ್ನು ಗೌರವಯುತವಾಗಿ ಕೊಟ್ಟರು.

ಜರ್ಮನಿಯ ಪುಸ್ತಕ ಪ್ರಕಾಶನ ವಿಭಾಗದಲ್ಲಿ ಗಾಂಧೀಯವರ ಜೀವನಚರಿತ್ರೆ ಮತ್ತು ಅವರ ವಿವಿಧ ಕಾರ್ಯಗಳನ್ನು ಕುರಿತ ಪುಸ್ತಕಗಳನ್ನು ಮುದ್ರಿಸಿ ವಿತರಣೆ ಮಾಡಿದರು. ಶಾಲೆಗಳಲ್ಲಿ ವಯಸ್ಕರ ವಿದ್ಯಾಭ್ಯಾಸದ ತರಗತಿಗಳಲ್ಲಿ, ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ವಿಕ್ಕ ಅನೇಕ ವಿದ್ಯಾಭಾಗಗಳಲ್ಲೂ ಗಾಂಧಿಯನ್ನು ಕುರಿತ ಅನೇಕ ಕಾರ್ಯಕ್ರಮಗಳು ನಡೆದವು. ಪತ್ರಿಕೆಗಳಲ್ಲಿಯೂ, ರೇಡಿಯೋ, ಟೆಲಿವಿಜ್ಞ ವಿಭಾಗಗಳಲ್ಲಿಯೂ ಗಾಂಧಿಯನ್ನು ಕುರಿತ ನೂರು ಕಾರ್ಯಕ್ರಮಗಳನ್ನು ಬರೆಯುವುದು ಮತ್ತು ಪ್ರಸಾರ ಕಾರ್ಯಕ್ರಮಗಳೂ ನಡೆದವು.

ಫೆಡರಾಲ್ ಸರ್ಕಾರದ ಟಪಾಲು ಇಲಾಖೆಯಲ್ಲಿ ಗಾಂಧಿಯವರ ಅಂಚೇಟೀಟೆಗಳನ್ನು ಮುದ್ರಿಸಿ ಅನೇಕ ಲಕ್ಷ ಸ್ಟ್ಯಾಂಪುಗಳನ್ನು ಮಾರಾಟ ಮಾಡಲಾಯಿತು.

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ

ಆದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ

ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆಯೆಚ್ಚು ಸೇರಿ ವರ್ಷಕ್ಕೆ ರೂ 10-00
ಸೋಮವಾರ ಪಂಚಿಕೆ ವರ್ಷಕ್ಕೆ ರೂ. 2

ಗೋರಕ್ಷಣೆಗೆ ಚಂದಾ ಮತ್ತು ಡೊನೇಷನ್ ಪಾವತಿಮಾಡುವ ಅಡ್ರೆಸ್

1 ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ
ಹೊಂಗನೂರು, ಚಾಮರಾಜನಗರ ತಾಲ್ಲೂಕ

2 ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಸಾಲಜರ್, 180 ನ್ಯೂ ಬ್ಲಾಕ್,
ವಿದ್ಯಾರಣ್ಯಪುರಂ, ಮೈಸೂರು.

3. ಡಾ || ಪಿ ಎಸ್ ನಾರಾಯಣ್, ಮತ್ತು ಪಿ ಎಸ್. ವಿಶ್ವನಾಥ್,
ಪ್ರಾಣಿದಯಾ ಪ್ರಚಾರಕರು, 320 – 5 ನೆ ಬ್ಲಾಕ್, ಜಯನಗರ, ಬೆಂಗಳೂರು
ಗೋರಕ್ಷಣ ಆಫೀಸ್, ಸತ್ಯವಾದಿ ಪ್ರೆಸ್ ಚಾಮರಾಜಪುರಂ, ಮೈಸೂರು 4

Quality Printing — Neat Binding

Lakshminarasimha Press

Sivarampet, Mysore

Protect the Cow
Help The Gorakshana

ಅಖಿಲ ಭಾರತದಲ್ಲಿ ಕೂಡಲೇ
ಗೋವಧೆ ನಿಷೇಧವಾಗಲಿ

ದೇಶದ ಹಿತಕಾಗಿ
ಕುಟುಂಬ ಯೋಜನೆ

ವುಡ್‌ಲ್ಯಾಂಡ್ ಅಮೋಘ 4 ನೇ ವಾರ
ಶಿನ್ ಅಮೋಘ ಪ್ರಾರಂಭ
.... ತುಂಬಿದ ಚಿತ್ರಮಂದಿರಕ್ಕೆ ಪ್ರದರ್ಶಿತವಾಗುತ್ತಿದೆ ....
ಓರ್ವ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅಮೋಘ ಕನ್ನಡ ಚಿತ್ರ

ಗೆಜ್ಜೆಪೂಜೆ

ನಟವರ್ಗ– ಕಲ್ಪನ, ಅಶ್ವತ್ಥ್, ಬಾಲಕೃಷ್ಣ, ಪಂಡರಿಬಾಯಿ
[ದಿನ 3 ಪ್ರದರ್ಶನಗಳು]

ಆಪೆರಾ 23–1–70 ರಿಂದ
.... ಅತ್ಯಮೋಘ ಕನ್ನಡ ಚಿತ್ರ ....

ಭಲೇ ಕಿಲಾಡಿ

ಪಾತ್ರ : ನರಸಿಂಹರಾಜು ರಂಗ ವೆಂಕಟೇಶ್
ಕಥೆ – ಸಂಭಾಷಣೆ : ಹುಣಸೂರ್ ಕೃಷ್ಣಮೂರ್ತಿ
ದಿಗ್ದರ್ಶನ : ಎ. ನಾಗರಾಜ್
ದಿನ 3 ಆಟಗಳು

SHAKTI SUDHA

A Superb Tonic



ಗೋರಕ್ಷಣೆ ಮುಖ್ಯ, ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ
ಗೋರಕ್ಷಣೆಗೆ ಬೆಂಬಲ ನೀಡಿ

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4